**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

"ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾಗಶಃ ಅರಣ್ಯ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ ಒದಗಿಸುವುದಕ್ಕಾಗಿ ನಡೆಯುತ್ತಿರುವ ಅರಣ್ಯ ಇಲಾಖೆ ಜಂಟಿ ಸರ್ವೆ ಸದ್ಯ ಇಕ್ಕಟ್ಟಿಗೆ ಸಿಲುಕಿದಂತಿದೆ. ಸಮೀಕ್ಷೆ ನಡೆಸಿದ ಬಳಿಕ ಅದರ ವರದಿ ಮಾಡುವ ಮೊದಲು ದಾಖಲೀಕರಣ ಆಗಬೇಕಿದ್ದು, ಅದಕ್ಕೆ ರೆವಿನ್ಯೂ ಟಿಪ್ಪಣಿ / ಎಫ್.ಎಂ.ಬಿ. ಹಾಗೂ ಗ್ರಾಮ ನಕ್ಷೆಗಳು ತಾಳೆಯಾಗುತ್ತಿಲ್ಲ. ಇದರಿಂದಾಗಿ ಬಹುತೇಕ ಪ್ರಕರಣಗಳಲ್ಲಿ ಅರಣ್ಯ ಭಾಗವೇ ಕಡಿಮೆಯಾಗುತ್ತಿರುವುದು ಸಮಸ್ಯೆಯಾಗಿದೆ. ಸುಪ್ರೀಂ ಕೋರ್ಟ್‌ಗೆ ಅರಣ್ಯ ಇಲಾಖೆ 1,30,000 ಹೆಕ್ಟೇರ್ ಅರಣ್ಯ ಇದೆ ಎಂದು ಡಿಕ್ಲರೇಶನ್‌ನಲ್ಲಿ ತಿಳಿಸಿರುವುದರಿಂದ ಅರಣ್ಯ ಭಾಗ ಹೆಚ್ಚಾದರೂ ಪರವಾಗಿಲ್ಲ, ಕಡಿಮೆಯಾದರೆ ತೊಂದರೆಯಾಗುತ್ತದೆ. ಹೀಗಾಗಿ ಈ ಬೃಹತ್ ಸಮೀಕ್ಷೆ ಕಾರ್ಯದಲ್ಲಿ ಮುಂದೇನು ಎನ್ನುವ ಪ್ರಶ್ನೆ ಎದುರಾಗಿದೆ".

ದಕ್ಷಿಣ ಕನ್ನಡ ಜಿಲ್ಲೆಯ ಹಲವು ಕಡೆ ಭಾಗಶಃ ಅರಣ್ಯ ಎನ್ನುವ ಗುರುತಿಸುವಿಕೆ ಸಮಸ್ಯೆಯಾಗಿದೆ. ಸರ್ಕಾರಿ ಭೂಮಿ ಗ್ರಾಂಟ್ ನೀಡುವುದಕ್ಕೆ ಇದು ಅಡ್ಡಿಯಾಗುತ್ತಿದ್ದು, ಇದನ್ನು ಬಗೆಹರಿಸುವುದಕ್ಕಾಗಿಯೇ ಶಿವಮೊಗ್ಗದ ಅರಣ್ಯ ಇಲಾಖೆಯ ವಿಶೇಷ ಕಾರ್ಯ ಯೋಜನೆ ತಂಡದವರಿಂದ ಸಮೀಕ್ಷೆ ಆರಂಭಿಸಲಾಗಿತ್ತು. ಕಡಬ, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು, ಸುಳ್ಯ ತಾಲ್ಲೂಕಿನ 66,816 ಹೆಕ್ಟೇರ್‌ನಷ್ಟು ಅರಣ್ಯದ ಒಟ್ಟು 66 ಬ್ಲಾಕ್‌ಗಳಲ್ಲಿ ಭಾಗಶಃ ಅರಣ್ಯ ಜಾಗ ಜಂಟಿ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ. ಇಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಅವಕಾಶಗಳಿಲ್ಲ. ಎನ್‌ಒಸಿ ನೀಡಲಾಗುವುದಿಲ್ಲ. 94ಸಿ, ಬಗರ್ ಹುಕುಂ ಅಡಿಯಲ್ಲಿ ಭೂಮಿ ಮಂಜೂರು ಮಾಡುವುದು ಸಾಧ್ಯವಾಗುವುದಿಲ್ಲ. ಹಾಗಾಗಿ ಈ ಸಮಸ್ಯೆ ಇತ್ಯರ್ಥ ಮಾಡಿಕೊಡಬೇಕು ಎನ್ನುವ ಬೇಡಿಕೆ ದಶಕಗಳಿಂದಲೇ ಇದೆ.

ಹಳೆಯ ದಾಖಲೆಗಳಿಂದ ಬಂದಂತೆ ಆರ್.ಟಿ.ಸಿ.ಯ 11ನೇ ಕಾಲಂನಲ್ಲಿ ಭಾಗಶಃ ಅರಣ್ಯ ಎಂದೇ ನಮೂದಿಸಲ್ಪಟ್ಟರೆ ಬಳಿಕ ಆ ಪ್ರದೇಶವನ್ನು ಸರ್ಕಾರ ಯಾವುದೇ ಯೋಜನೆಗೆ ಬಳಸಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಹೆಚ್ಚಾಗಿ ದೊಡ್ಡದಾದ ಪ್ರದೇಶ ಕಂದಾಯ ಭೂಮಿಯಾಗಿದ್ದರೂ ಅರಣ್ಯ ಇಲಾಖೆ ದಾಖಲೆಯ ಪ್ರಕಾರ ಭಾಗಶಃ ಅರಣ್ಯ ಎಂದೇ ಗುರುತಾಗಿರುತ್ತದೆ. ಇಂತಹ ಪ್ರಕರಣಗಳನ್ನು ಜಂಟಿ ಸಮೀಕ್ಷೆ ಮೂಲಕ ಬಗೆಹರಿಸಿಕೊಂಡು, ಸರಿಯಾದ ಪ್ಲಾಂಟಿಂಗ್ ಆಗದೆ ಹೋದರೆ ಎಷ್ಟು ಭಾಗ ಅರಣ್ಯ ಇಲಾಖೆಗೆ ಸೇರಿದ್ದು, ಎಷ್ಟು ಭಾಗ ಕಂದಾಯ ಇಲಾಖೆಯದ್ದು ಎನ್ನುವ ಮಾಹಿತಿ ಇರುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗಲಿದ್ದು, ಆದಷ್ಟು ಬೇಗ ಹಿರಿಯ ಅಧಿಕಾರಿಗಳ ತಂಡದಿಂದ ತಾಂತ್ರಿಕ ತೊಂದರೆಯನ್ನು ಬಗೆಹರಿಸಿ, ಜಂಟಿ ಸಮೀಕ್ಷೆ ಕಾರ್ಯ ಮುಕ್ತಾಯಗೊಳಿಸಿ ಈ ಭಾಗದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಅನುವು ಮಾಡಿಕೊಡಬೇಕೆಂದು ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯ ಮಂತ್ರಿಗಳನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:**

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಅರಣ್ಯ ವ್ಯಾಪ್ತಿಯಲ್ಲಿ ಬ್ರಿಟೀಷ್ ಸರ್ಕಾರದ ಅಧೀನದಲ್ಲಿ ಮದ್ರಾಸ್ ಪ್ರಾಂತ್ಯದ ಅಡಿಯಲ್ಲಿ ಮದ್ರಾಸ್ ಅರಣ್ಯ ಕಾಯ್ದೆ 1882, ಸೆಕ್ಷನ್ 16 ರಲ್ಲಿ ಒಟ್ಟು 66 ಅಧಿಸೂಚನೆಗೊಂಡ ಅರಣ್ಯ ಬ್ಲಾಕ್ ಪ್ರದೇಶಗಳಿದ್ದು, ಅವುಗಳ ವಿಸ್ತೀರ್ಣ 95736.42 ಹೆ. ಇರುತ್ತದೆ. ಈ ಅಧಿಸೂಚನೆಗಳಲ್ಲಿ ಸರ್ವೆ ನಂಬರ್ ವಾರು ವಿಸ್ತೀರ್ಣ ಒಳಗೊಂಡಿರುವ "ಸಿ" ಸ್ಟೇಟ್‌ಮೆಂಟ್ ಇರುವುದಿಲ್ಲ.

ಈ ಅರಣ್ಯ ಪ್ರದೇಶಗಳಿಗೆ ಹೊಳೆ, ತೋಡು, ಕೃಷಿಭೂಮಿ ಇತ್ಯಾದಿ ಪ್ರಾಕೃತಿಕ ಗಡಿಗಳನ್ನೇ ಅರಣ್ಯ ಗಡಿಗಳಾಗಿ ಅಧಿಸೂಚನೆಯಲ್ಲಿ ನಮೂದಿಸಿ ಗುಪ್ಪೆಯಿಂದ ಗುಪ್ಪೆಗೆ ಇರುವ ಅಂತರವನ್ನು ಅಂದಾಜು ಮೈಲುಗಳು, ಫರ್ಲಾಂಗುಗಳು ಹಾಗೂ ಯಾರ್ಡ್ ಗಳಲ್ಲಿ ನಮೂದಿಸಲ್ಪಟ್ಟಿರುತ್ತದೆ. ಈ ಮೀಸಲು ಅರಣ್ಯಗಳ ಗ್ರಾಮವಾರು ಹಾಗೂ ಸರ್ವೆ ನಂಬರ್ ವಾರು ವಿಸ್ತೀರ್ಣವು ಅಧಿಸೂಚನೆಯಲ್ಲಿ ಲಭ್ಯವಿಲ್ಲದೇ ಇರುವುದರಿಂದಾಗಿ ಈ ತನಕ ಈ ಅರಣ್ಯ ಪ್ರದೇಶಗಳ ವಿಸ್ತೀರ್ಣವನ್ನು ಕಂದಾಯ ಇಲಾಖಾ ದಾಖಲೆಗಳಲ್ಲಿ ಇಂಡೀಕರಣ (Mutation) ಮಾಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈಗಲೂ ಹೆಚ್ಚಿನ ಮೀಸಲು ಅರಣ್ಯಗಳ ಪಹಣಿಯಲ್ಲಿ ಸರ್ಕಾರ / ಅಂಶಿಕ ಅರಣ್ಯವೆಂದು ದಾಖಲಿಸಿರುವುದು ಕಂಡುಬರುತ್ತದೆ.

ಮಂಗಳೂರು ಅರಣ್ಯ ವಿಭಾಗದಲ್ಲಿ ಒಟ್ಟು 66 ಬ್ಲಾಕ್‌ಗಳಲ್ಲಿ ಜಂಟಿ ಸರ್ವೆ ನಡೆಯುತ್ತಿದ್ದು, ಜಂಟಿ ಸರ್ವೆಯನ್ನು ಸ್ಥಳೀಯ ಜನರ ಕೋರಿಕೆಯ ಮೇರೆಗೆ ಜಿಲ್ಲಾ ಮಟ್ಟದಲ್ಲಿ ಅರಣ್ಯ/ ಕಂದಾಯ/ ಎ.ಡಿ.ಎಲ್.ಆರ್. ಮತ್ತು ಕಾರ್ಯಯೋಜನೆ ಶಿವಮೊಗ್ಗ ಇವರನ್ನು ಒಳಗೊಂಡ 21 ಬ್ಲಾಕ್‌ಗಳನ್ನು ಜಂಟಿ ಸರ್ವೆಗೆ ತೆಗೆದುಕೊಂಡಿದ್ದು, ಈ ಪೈಕಿ ಒಟ್ಟು 16 ಬ್ಲಾಕ್‌ಗಳನ್ನು ಪೂರ್ಣಗೊಳಿಸಿದ್ದು, 05 ಬ್ಲಾಕ್‌ಗಳು ಭಾಗಶಃ ಪೂರ್ಣಗೊಂಡು ಜಂಟಿ ಸರ್ವೆ ಪ್ರಗತಿಯಲ್ಲಿರುತ್ತದೆ. ಹೀಗೆ ಒಟ್ಟು 16 ಬ್ಲಾಕ್‌ಗಳಲ್ಲಿ 11 ಬ್ಲಾಕ್‌ಗಳ ವಿಸ್ತೀರ್ಣವು ಕಡಿಮೆಯಾಗಿರುವುದು ಕಂಡುಬಂದಿದ್ದು, ಉಳಿದ 5 ಬ್ಲಾಕ್‌ಗಳ ವಿಸ್ತೀರ್ಣವು ಹೆಚ್ಚಾಗಿರುವುದು ಕಂಡುಬಂದಿದೆ. **(ಅನುಬಂಧದಲ್ಲಿ ಒದಗಿಸಿದೆ)** ಒಟ್ಟಾರೆಯಾಗಿ 16 ಬ್ಲಾಕ್‌ಗಳಿಂದ 4448.38 ಎಕರೆಗಳಷ್ಟು ಅರಣ್ಯ ಪ್ರದೇಶವು ಕಡಿಮೆಯಾಗಿರುವುದು ಕಂಡು ಬಂದಿರುತ್ತದೆ.

ಮುಂದುವರೆದು, ಸ್ಥಳೀಯವಾಗಿ ಜಂಟಿ ಪರಿಶೀಲನಾ ತಂಡವು ಅರಣ್ಯ ವ್ಯತ್ಯಾಸದ ಬಗ್ಗೆ ಯಾವುದೇ ರೀತಿಯ ಅಭಿಪ್ರಾಯವನ್ನು ನೀಡಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಸರ್ವೇ ಆಫ್ ಇಂಡಿಯಾ ಅಥವಾ ಇನ್ನಿತರೆ ತಜ್ಞ ಸಂಸ್ಥೆಯ ನೆರವು ಪಡೆದು, ಮುಂದಿನ ಕ್ರಮ ಜರುಗಿಸಲಾಗುವುದು.

ಸಂಖ್ಯೆ:ಅಪಜೀ 144 ಎಫ್‌ಎಎಫ್ 2026

(ರಾಮಲಿಂಗಾರೆಡ್ಡಿ)

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.

# ಅನುಬಂಧ - 1

## ಕಾರ್ಯಯೋಜನೆ ಘಟಕದಿಂದ Re-Survey ಮಾಡಿರುವ ಮೀಸಲು ಅರಣ್ಯಗಳ ವಿವರ.

| Sl. No. | Name of the Range | Name of the RF | Section | Notification Extent (in Acres) | Re-Survey Extent (in Acres) | Difference in Acres | 'C' Statement - available or not |
|---|---|---|---|---|---|---|---|
| 1 | Bantwal | Kodyamale RF | 16 | 1108.00 | *1064.10* | (-) 43.90 | C' Statement not availbale in Notification |
| 2 | Belthangady | Dharmasthala Mundaje RF Extn, Block - IV | 16 | 969.97 | *874.38* | (-) 95.59 | C' Statement not availbale in Notification |
| 3 | Belthangady | Dharmasthala Mundaje RF | 16 | 4996.48 | *4450.03* | (-) 546.45 Acres | C' Statement not availbale in Notification |
| 4 | Uppinangady | Nidle RF | 16 | 3269.00 | *2663.72* | (-) 605.28 Acres | C' Statement not availbale in Notification |
| 5 | Uppinangady | Miyar RF | 16 | 17533.00 | 14650.28 | (-) 2882.72 | C' Statement not availbale in Notification |
| 6 | Uppinangady | Nerankimale RF | 16 | 3164.10 | *3505.25* | (+) 341.15 | C' Statement not availbale in Notification |
| 7 | Uppinangady | Shirady Shishila RF | 16 | 20480.00 | *23233.99* | (+) 2753.99 | C' Statement not availbale in Notification |
| 8 | Uppinangady | Kalanja Block | 17 | 335.00 | 333.22 | (-) 1.78 | C' Statement not availbale in Notification |
| 9 | Uppinangady | Miyar RF Extn. Block | 17 | 217.70 | 195.60 | (-) 22.10 | C' Statement not availbale in Notification |
| 10 | Uppinangady | Nidle RF Extn. Block-1 | 17 | 323.75 | 325.61 | (+) 1.86 | C' Statement not availbale in Notification |
| 11 | Uppinangady | Porkala RF Extn. Block I | 17 | 56.15 | *59.30* | (+) 3.15 | C' Statement not availbale in Notification |

| Sl. No. | Name of the Range | Name of the RF | Section | Notification Extent (In Acres) | Re-Survey Extent (In Acres) | Difference In Acres | 'C' Statement - available or not |
|---|---|---|---|---|---|---|---|
| 12 | Sullia | Medinadka East RF | 16 | 724.00 | *533.94* | (-) 190.06 | C' Statement not availbale in Notification |
| 13 | Sullia | Medinadka West RF | 16 | 3111.00 | *2401.68* | (-) 709.32 | C' Statement not availbale in Notification |
| 14 | Sullia | Aletty West RF (Medinadka RF) | 16 | 3878.00 | *2893.06* | (-) 984.94 | C' Statement not availbale in Notification |
| 15 | Sullia | Mandekolu RF | 16 | 5344.00 | *3450.71* | (-) 1893.29 Enclosures 60.06 Acres | C' Statement not availbale in Notification |
| 16 | Sullia | Aletty East RF | 16 | 5301.00 | *5727.90* | (+) 426.90 | C' Statement not availbale in Notification |
| TOTAL | | | | 70811.15 | 66362.77 | | |

ಟಿಪ್ಪಣಿ: 16 ಬ್ಲಾಕ್‌ಗಳಲ್ಲಿ 11 ಬ್ಲಾಕ್‌ಗಳಲ್ಲಿ ವಿಸ್ತೀರ್ಣವು ಕಡಿಮೆಯಾಗಿರುವುದು ಕಂಡುಬಂದಿದ್ದು, ಉಳಿದ 5 ಬ್ಲಾಕ್‌ಗಳಲ್ಲಿ ವಿಸ್ತೀರ್ಣವು ಹೆಚ್ಚಾಗಿರುವುದು ಕಂಡುಬಂದಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಂಗಳೂರು ವಿಭಾಗ, ಮಂಗಳೂರು